**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಓ ಎಸ್ ನಂಃ 162/2023**

**ಪಿ ಡಬ್ಲ್ಯೂ/1**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 13.08.2025**

**ಮುಂ. ಪಾಟೀ ಸವಾಲುಃ ಶ್ರೀ ಎಮ್ ಎಮ್ ಜಿ ವಕೀಲರಿಂದ 2 ರಿಂದ 5 ನೇ ಪ್ರತಿವಾದಿ ಪರ ವಕೀಲರುಃ**

3. ದಾವಾ ಆಸ್ತಿಗೆ ನಾನು ಒಬ್ಬನೇ ಮಾಲೀಕನು ಆಗದ ಕಾರಣ ಈ ದಾವೆ ಮಾಡಲು ನನಗೆ ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮಾಲ್ಕೀ ಪ್ರತ್ಯೇಕ್ಷ ಕಬ್ಜಾವಹಿವಾಟದಲ್ಲಿ ನಾನು ಇರುವುದಿಲ್ಲ ಎಂದರೆ ಸರಿಯಲ್ಲ, ಆದ್ದರಿಂದ ನಾನು ಈ ದಾವಾ ಮಾಡಲು ಕಾಯ್ದೆಯಿಂದ ಬರುವುದಿಲ್ಲ ಎಂದರೆ ಸರಿಯಲ್ಲ.

4. ನಾನು ದಾವಾ ಆಸ್ತಿ ಅಳತೆ ಕಾರ್ಯಕ್ಕೆ ಅರ್ಜಿ ನೀಡಿರುವ ಬಗ್ಗೆ ಹೇಳಿದ್ದು ಅದನ್ನು ದಿಃ12.06.2020 ರಂದು ನೀಡಿರುತ್ತೇನೆ. ಅಳತೆಗೆ ಅರ್ಜಿ ನೀಡಿದ ಬಗ್ಗೆ ನನ್ನ ಬಳಿ ಸ್ವೀಕೃತಿ ದಾಖಲೆ ಇರುವುದಿಲ್ಲ. ಸರ್ವೇ ಕಾರ್ಯಕ್ಕೆ ಜಮೀನಿನ ಆಜುಬಾಜು ಮಾಲೀಕರಿಗೆ ಕಾನೂನಬದ್ಧ ನೋಟಿಸ್ಸು ನೀಡಲಾಗಿತ್ತು. ಅದೇ ಪ್ರಕಾರ ನೋಟಿಸ್ಸು ನನಗೂ ಸಹ ಜಾರಿಯಾಗಿತ್ತು. ಅದು ನನಗೆ ದಿಃ12.02.2021 ರಂದು ನೋಟಿಸ್ಸು ಜಾರಿಯಾಗಿತ್ತು. ಸದರಿ ನೋಟಿಸ್ಸಿನ ಪ್ರತಿಯನ್ನು ಈ ದಾವೆಯಲ್ಲಿ ಹಾಜರು ಮಾಡಿರುವುದಿಲ್ಲ.

5. ಸರ್ವೇಯರ್ ಇವರು ಅಳತೆ ಕಾರ್ಯಕ್ಕೆ ದಿಃ17.02.2021 ರಂದು ಬಂದಿದ್ದರು. ಅಳತೆ ಕಾರ್ಯದ ಸಮಯದಲ್ಲಿ ನಾನು, ಎಲ್ಲಾ ಪ್ರತಿವಾದಿಯರು, ಆಜುಬಾಜು ಹೊಲದವರು ಹಾಗೂ ಸರ್ವೇ ಮಾಡುವ ಅಧಿಕಾರಿ ಹಾಜರು ಇದ್ದರು. ಅಳತೆಯನ್ನು ಸರಪಳಿಯಿಂದ ಸರ್ವೇ ಕಚೇರಿಯಲ್ಲಿ ಆಸ್ತಿಗೆ ಸಂಬಂದಪಟ್ಟ ದಾಖಲೆಗಳನ್ನು ತರುವ ಮೂಲಕ ಮಾಡಿರುತ್ತಾರೆ.

6. ಅಳತೆ ಕಾರ್ಯಕ್ಕೆ ಮಹಜರ ಬರೆದಿರುತ್ತಾರೆ. ಮಹಜರ ಬರೆಯಲು ಪಂಚರ ಹೆಸರು ಗೊತ್ತಿಲ್ಲ. ನಾನು ನನ್ನ ಜಮೀನನ್ನು ಅಳತೆ ಮಾಡಲು ಅರ್ಜಿ ನೀಡಿರುವುದಿಲ್ಲ ಹಾಗೂ ನಾನು ಹೇಳಿದ ರೀತಿಯಲ್ಲಿ ಸರ್ವೇಯರ ಇವರು ಜಮೀನಿನ ಅಳತೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

7. ದಾವಾ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ ಚಂದ್ರಶೇಖರ ಹುಡೇದ ಇವರ ಹೊಲ, ಪಶ್ಚಿಮಕ್ಕೆ ಸೋಮಪ್ಪ 6 ನೇ ಪ್ರತಿವಾದಿ ಮತ್ತು ಅವರ ಕುಟುಂಬದವರಿಗೆ ಸೇರಿದ ಆಸ್ತಿ,

ಉತ್ತರಕ್ಕೆ ಅಳಗವಾಡಿ ಇವರ ಜಮೀನು ಮತ್ತು ದಕ್ಷಿಣಕ್ಕೆ ಪ್ರತಿವಾದಿ 1 ರಿಂದ 5 ಇವರ ಜಮೀನು ಇದೆ.

8. ನನ್ನ ಜಮೀನಿನ ದಕ್ಷಿಣಕ್ಕೆ ಸ.ನಂಃ47/3/4/5 ಹತ್ತಿರುತ್ತದೆ. ನಾನು ವಾದ ಪತ್ರದೊಂದಿಗೆ ಸಲ್ಲಿಸಿದ ಹಾತ್ ನಕಾಶೆಯಲ್ಲಿ ದಾವಾ ಜಮೀನಿನ ದಕ್ಷಿಣಕ್ಕೆ ಸ.ನಂಃ47 ಹತ್ತಿದೆ ಅಂತ ಕಾಣಿಸಿರುತ್ತೇನೆ. ಸ.ನಂಃ47 ನಾನು ಈ ದಾವೆ ದಾಖಲಿಸುವ ಸಮಯದಲ್ಲಿ ಪೋಡಿಯಾಗಿರುವುದಿಲ್ಲ. ಸ.ನಂಃ47 ಸುಮಾರು 20 ರಿಂದ 30 ವರ್ಷದ ಹಿಂದೆಯೆ ಪೋಡಿಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಪೋಡಿ ಪ್ರಕಾರ ಸ.ನಂಃ47/5 ಜಮೀನು 5 ನೇ ಪ್ರತಿವಾದಿಯ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸಾಕ್ಷಿ ಅದು 5 ನೇ ಪ್ರತಿವಾದಿ ಹೆಸರಿಗೆ ಇದೆ ಎಂದು ನುಡಿಯುತ್ತಾರೆ. ಸ.ನಂಃ47/5 ರ ಕ್ಷೇತ್ರ ನನಗೆ ನಿಖರವಾಗಿ ಗೊತ್ತಿಲ್ಲ. ಆ ಜಮೀನಿನ ಕ್ಷೇತ್ರ 2 ಎಕರೆ 35 ಗುಂಟೆ ಇದೆ ಎಂದರೆ ನನಗೆ ಸ್ಪಷ್ಟವಾಗಿ ಗೊತ್ತಿಲ್ಲ. ಸದರಿ ಜಮೀನಿಗೆ 5 ನೇ ಪ್ರತಿವಾದಿ ಮಾಲ್ಕೀ ಕಬ್ಜಾವಹಿವಾಟದಲ್ಲಿ ಇದ್ದಾರೆ ಎಂದರೆ ಸರಿ.

9. ರಿ.ಸ.ನಂಃ47/4 ಕ್ಷೇತ್ರ 2 ಎಕರೆ 34 ಗುಂಟೆಗೆ ಪ್ರತಿವಾದಿ 2 ರಿಂದ 4 ರವರು ಮಾಲೀಕರು ಹಾಗೂ ಕಬ್ಜಾವಹಿವಾಟದಾರರು ಎಂದರೆ ಸರಿ. ಆದೇ ರೀತಿ ಸ.ನಂಃ47/3 ಕ್ಕೆ 1 ನೇ ಪ್ರತಿವಾದಿ ಮಾಲ್ಕೀ ಕಬ್ಜಾವಹಿವಾಟದಾರರು ಎಂದರೆ ಸರಿ.

10. ರಿ.ಸ.ನಂಃ47/5, 47/4 ಮತ್ತು 47/3 ಜಮೀನುಗಳನ್ನು ಆಯಾ ಮಾಲೀಕರು ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಾರೆ ಎಂದರೆ ಸರಿ. ನಾನು ನನ್ನ ಜಮೀನಿನಲ್ಲಿ ಪ್ರತಿವಾದಿ 2 ರಿಂದ 5 ರವರು ಅತಿಕ್ರಮಣ ಮಾಡಿರುವ ಬಗ್ಗೆ ಹೇಳಿದ್ದು, ಆ ಪ್ರಕಾರ ಅವರು ಸರ್ವೇ ದಾಖಲೆಯಂತೆ ಒತ್ತುವರಿ ಮಾಡಿರುತ್ತಾರೆ, ನನಗೆ ಮೌಖಿಕವಾಗಿ ಹೇಳಲಾಗುವುದಿಲ್ಲ, ಸದರಿ ಜಮೀನು ಅಖಂಡ ಆಗಿದ್ದರಿಂದ ನನಗೆ ಆ ಬಗ್ಗೆ ಮೌಖಿಕವಾಗಿ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ.

11. ನನ್ನ ದಾವೆಯಲ್ಲಿ ನಾನು ಪ್ರತಿವಾದಿ 2 ರಿಂದ 5 ರವರ ಜಮೀನುಗಳು ಪ್ರತ್ಯೇಕವಾಗಿ ಇದೆ ಅಂತ ಕಾಣಿಸಿದ್ದು ಹಾಗೂ ಆ ಬಗ್ಗೆ ಕಾಗದ ಸಹ ಹಾಜರುಪಡಿಸಿರುತ್ತೇನೆ. ರಿ.ಸ.ನಂಃ47 ಪೋಡಿಯಾಗಿದ್ದರಿಂದ ನಾನು ಸದರಿ ಜಮೀನಿನ ಪೋಡಿ ಮಾಲೀಕರ ವಿರುದ್ಧ ಪ್ರತ್ಯೇಕ ದಾವೆಯನ್ನು ಸಲ್ಲಿಸಬೇಕಾಗಿತ್ತು, ಆದ್ದರಿಂದ ಈ ದಾವೆ ಊರ್ಜಿತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ಸರ್ವೇ ದಾಖಲೆಯಲ್ಲಿ ಸ.ನಂಃ47 ಅಖಂಡ ಇದೆ ಎಂದು ನಮೂದಿಸಲಾಗಿದೆ ಎಂದು ನುಡಿಯುತ್ತಾರೆ.

12. ನಾನು 6 ನೇ ಪ್ರತಿವಾದಿ ಒತ್ತುವರಿಯಾದ ಜಮೀನನ್ನು ಬಿಟ್ಟುಕೊಡುವುದಾಗಿ ತಿಳಿಸಿರುವ ಬಗ್ಗೆ ಹೇಳಿದ್ದು, ಆ ಪ್ರಕಾರ ಅವರು ಯಾವುದೇ ದಾಖಲೆಯನ್ನು ಬರೆದುಕೊಟ್ಟಿರುವುದಿಲ್ಲ, ಆದರೆ ಅವರು ಹಿರಿಯರ ಸಮಕ್ಷಮ ಮೌಖಿಕವಾಗಿ ತಿಳಿಸಿರುತ್ತಾರೆ. ನಾನು ಹೇಳುವ ಪ್ರಕಾರ ಹಾಗೂ ಸರ್ವೇ ದಾಖಲೆ ಪ್ರಕಾರ ನನ್ನ ಜಮೀನು ಒತ್ತುವರಿ ಆಗಿರುವುದಿಲ್ಲ ಹಾಗೂ ಒತ್ತುವರಿ ಆಗಿದೆ ಅಂತ ನಾನು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನಾನು ಒತ್ತುವರಿ ಆಗಿದೆ ಅಂತ ಹೇಳಿದ ಪ್ರಕಾರವೇ ನ್ಯಾಯಾಲಯದ ಶುಲ್ಕ ಪಾವತಿಸಬೇಕಾಗಿರುತ್ತದೆ, ಆ ರೀತಿ ಸರಿಯಾದ ಶುಲ್ಕವನ್ನು ಪಾವತಿಸದೇ ಇದ್ದಿದ್ದರಿಂದ ನನ್ನ ದಾವೆ ಊರ್ಜಿತವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಸರ್ವೇ ಅಧಿಕಾರಿಗಳು ಕೂಡಿಕೊಂಡು ಅವರ ಕಚೇರಿಯಲ್ಲಿಯೇ ಸರ್ವೇ ದಾಖಲೆ ಸೃಷ್ಟಿ ಮಾಡಿ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆಯನ್ನು ಮಾಡಿ, ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಸಾಕ್ಷಿಯ ಸಂಪೂರ್ಣ ಪಾಟೀ ಸವಾಲು ಮಾಡಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

Sd/-

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**